ಪ್ರಶ್ನೆ ಸಂಖ್ಯೆ 3 (90)

(ಮಾನ್ಯ ಸದಸ್ಯರು ಗೈರುಹಾಜರು)

ಬೆಂಗಳೂರು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪೊಲೀಸ್ ಸ್ಟೇಷನ್‌ಗಳನ್ನು ಆಧುನೀಕರಣಗೊಳಿಸುವುದು.

(4) 126:ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2004–05 ಮತ್ತು 2005–06ನೇ ಸಾಲಿನಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಎಷ್ಟು ಪೊಲೀಸ್ ಸ್ಟೇಷನ್‌ಗಳನ್ನು ಆಧುನೀಕರಣ ಗೊಳಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಸೂಕ್ಷ್ಮ ಪ್ರದೇಶಗಳಲ್ಲಿನ ಪೊಲೀಸ್ ಸ್ಟೇಷನ್‌ಗಳಿಗೆ ಆಧುನಿಕ ಉಪಕರಣ ಮತ್ತು ಪೂರ್ಣ ಪ್ರಮಾಣದ ಸಿಬ್ಬಂದಿಗಳನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆಯೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಎಲ್ಲಾ ಜಿಲ್ಲೆಗಳಿಗೆ ಆಧುನೀಕರಣ ಯೋಜನೆಯಡಿಯಲ್ಲಿ ಲಭ್ಯ ಸವಲತ್ತುಗಳನ್ನು ಅಲ್ಲಿಯ ಠಾಣೆಗಳ ಅವಶ್ಯಕತೆ ಅನುಗುಣವಾಗಿ ವ್ಯವಸ್ಥೆ ಮಾಡಲಾಗಿದೆ ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಿದೆ.

ಅಲ್ಲದೆ ಒಟ್ಟು 72 ಠಾಣೆಗಳ ಕಟ್ಟಡಗಳನ್ನು 2004–05 ಮತ್ತು 2005–06ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ. ಠಾಣಾ ಕಟ್ಟಡಗಳ ವಿವರಗಳನ್ನು ಅನುಬಂದ (ಬಿ)ರಲ್ಲಿ ನೀಡಿದೆ.

ಆ) 1) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಉತ್ತರವನ್ನು ಅನುಬಂಧ(ಸಿ) ಯಲ್ಲಿ ನೀಡಿದೆ.

2) ಉಡುಪಿ ಜಿಲ್ಲೆಗೆ ಸಂಬಂಧಿಸಿದ ಉತ್ತರವನ್ನು ಅನುಬಂಧ(ಡಿ)ಯಲ್ಲಿ ನೀಡಲಾಗಿದೆ.

ಅನುಬಂಧ – (ಎ)

2004–2005 ಮತ್ತು 2005–2006ನೇ ಸಾಲಿನ ಈ ಕೆಳಗೆ ಹೆಸರಿಸಿದ ಸಂಪರ್ಕ, ಭದ್ರತಾ ಮತ್ತು ಇತರೆ ಉಪಕರಣಗಳನ್ನು ರಾಜ್ಯದ ಎಲ್ಲಾ ಠಾಣೆಗಳಿಗೆ ಒದಗಿಸಲಾಗಿದೆ ವಿವರ ಕೆಳಗಿನಂತಿವೆ.

ಸಂಪರ್ಕ ಉಪಕರಣಗಳು

2004–2005

1. ವಿ. ಹೆಚ್. ಎಫ್ ಮೊಬೈಲ್ – 700 ಸಂಖ್ಯೆಗಳು
2. ವಿ. ಹೆಚ್. ಎಫ್/ಯು.ಹೆಚ್.ಎಫ್ ವಾಕಿಟಾಕಿಗಳು – 3000 ಸಂಖ್ಯೆಗಳು
3. ನಿರ್ವಹಣೆ ರಹಿತ ಬ್ಯಾಟರಿಗಳು – 1300 ಸಂಖ್ಯೆಗಳು
4. 60 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 40 ಸಂಖ್ಯೆಗಳು

2005–2006

1. ವಿ. ಹೆಚ್. ಎಫ್ ಮೊಬೈಲ್ – 700 ಸಂಖ್ಯೆಗಳು
2. ವಿ. ಹೆಚ್. ಎಫ್/ಯು. ಹೆಚ್. ಎಫ್ ವಾಕಿಟಾಕಿಗಳು – 3000 ಸಂಖ್ಯೆಗಳು
3. ಯು. ಹೆಚ್. ಎಫ್ ರಿಪೀಟರ್ಸ್ – 10 ಸಂಖ್ಯೆಗಳು
4. ಹೆಚ್. ಎಫ್. ಸೆಟ್ಸ್ – 30 ಸಂಖ್ಯೆಗಳು
5. ನಿರ್ವಹಣಾ ರಹಿತ ಬ್ಯಾಟರಿಗಳು – 2000 ಸಂಖ್ಯೆಗಳು
6. ಎನ್. ಐ. ಸಿ. ಡಿ. ಬ್ಯಾಟರಿಗಳು – 8000 ಸಂಖ್ಯೆಗಳು
7. 60 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 100 ಸಂಖ್ಯೆಗಳು
8. 100 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 60 ಸಂಖ್ಯೆಗಳು
9. ಫ್ಯಾಕ್ಸ್ ಯಂತ್ರಗಳು – 264 ಸಂಖ್ಯೆಗಳು

ಇತರೆ ಉಪಕರಣಗಳು

2004–2005

1. ಸೊಲಾರ್ ಪವರ್ ಪ್ಯಾನಲ್ಸ್ – 300 ಸಂಖ್ಯೆಗಳು
2. ಜನರೇಟರ್ಸ್ – 717 ಸಂಖ್ಯೆಗಳು
3. ಫ್ಯಾಕ್ಸ್ ಯಂತ್ರಗಳು – 400 ಸಂಖ್ಯೆಗಳು
4. ಎಲ್. ಸಿ. ಡಿ. ಪ್ರಾಜೆಕ್ಟರ್ – 06 ಸಂಖ್ಯೆಗಳು
5. 60 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 70 ಸಂಖ್ಯೆಗಳು

2005–2006

1. 60 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 140 ಸಂಖ್ಯೆಗಳು
2. ಫ್ಯಾಕ್ಸ್ ಯಂತ್ರಗಳು – 309 ಸಂಖ್ಯೆಗಳು
3. ಕಾಪೀಯರ್ ಯಂತ್ರಗಳು – 39 ಸಂಖ್ಯೆಗಳು
4. ಜೆನರೇಟರ್ಸ್ – 38 ಸಂಖ್ಯೆಗಳು
5. ಎಲ್. ಸಿ. ಡಿ. ಪ್ರಾಜೆಕ್ಟರ್ – 18 ಸಂಖ್ಯೆಗಳು
6. ಡೂಪ್ಲೊ / ಡಿಜಿಟಲ್ ಯಂತ್ರಗಳು – 42 ಸಂಖ್ಯೆಗಳು
7. ಲೇಸರ್ ಪ್ರಿಂಟರ್ – 121 ಸಂಖ್ಯೆಗಳು

ವಾಹನ ಸಾರಿಗೆ ವಿಭಾಗ

2004–2005

1. ಲಘು ಮತ್ತು ಭಾರಿ ವಾಹನಗಳು – 139 ಸಂಖ್ಯೆಗಳು
2. ದ್ವಿಚಕ್ರ ವಾಹನಗಳು – 93 ಸಂಖ್ಯೆಗಳು

2005–2006

1. ಲಘು ಮತ್ತು ಭಾರಿ ವಾಹನಗಳು – 148 ಸಂಖ್ಯೆಗಳು
2. ದ್ವಿಚಕ್ರ ವಾಹನಗಳು – 223 ಸಂಖ್ಯೆಗಳು

ಶಸ್ತ್ರಾಸ್ತ್ರಗಳು

2004–2005

1. 12 ಬೋರ್ ಪಂಪ್ ಆ್ಯಕ್ಷನ್ ಗನ್ – 250 ಸಂಖ್ಯೆಗಳು
2. 7.62 ಎಂ. ಎಂ. ಎಸ್. ಎಲ್. ಆರ್. – 500 ಸಂಖ್ಯೆಗಳು
3. ಪ್ರಾಜೆಕ್ಟರ್ ಪೈರೋ ಟೆಕ್ನಿಕ್ 13 ಎಂ. ಎಂ. 1/ಎ – 85 ಸಂಖ್ಯೆಗಳು
4. 51 ಎಂ. ಎಂ. ಮಾರ್ಟ್ರ್ – 5 ಸಂಖ್ಯೆಗಳು

2004–2005ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸರಬರಾಜು ಮಾಡಲಾದ ಉಪಕರಣಗಳು ಮತ್ತು ಆಯುಧಗಳ ವಿವರಗಳು.

ದಕ್ಷಿಣ ಕನ್ನಡ

ಉಪಕರಣಗಳು

1. ಹ್ಯಾಂಡಿ ಕ್ಯಾಮ್ಸ್ – 3 ಸಂಖ್ಯೆಗಳು
2. ಸ್ಮೋಕ್ ಮೀಟರ್ – 1 ಸಂಖ್ಯೆಗಳು
3. ಗ್ಯಾಸ್ ಅನಲೈಸರ್ – 1 ಸಂಖ್ಯೆಗಳು
4. ಬೈನಾಕ್ಯುಲರ್ – 1 ಸಂಖ್ಯೆಗಳು

ಆಯುಧಗಳು

1. ಪಿಸ್ತೂಲ್ ಗಳು – 10 ಸಂಖ್ಯೆಗಳು
2. ಬುಲೆಟ್ ಪ್ರೂಫ್ ಜಾಕೇಟ್ – 5 ಸಂಖ್ಯೆಗಳು
3. 7.62 ಎಂ. ಎಂ. ರೈಪಲ್‌ಗಳು – 10 ಸಂಖ್ಯೆಗಳು
4. ಪ್ರಾಜೆಕ್ಟರ್ ಪೈರೋ ಟೆಕ್ನಿಕ್ 13 ಎಂ.ಎಂ. 1.ಎ –4 ಸಂಖ್ಯೆಗಳು

ಸಂಪರ್ಕ ಉಪಕರಣಗಳು :

1. ವಿ. ಹೆಚ್. ಎಫ್ ಮೊಬೈಲ್ – 104 ಸಂಖ್ಯೆಗಳು
2. ವಿ. ಹೆಚ್. ಎಫ್/ಯು.ಹೆಚ್.ಎಫ್ ವಾಕಿಟಾಕಿಗಳು – 165 ಸಂಖ್ಯೆಗಳು.
3. 100 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ 140 ಸಂಖ್ಯೆಗಳು
4. ಫ್ಯಾಕ್ಸ್ ಯಂತ್ರಗಳು – 24 ಸಂಖ್ಯೆಗಳು

5. ಸೋಲಾರ್ ಪ್ಯಾನಲ್ಸ್ – 14 ಸಂಖ್ಯೆಗಳು

ವಾಹನಗಳು :

1. ಟಾಟಾ ಸ್ವೇಷಿಯೋ – 1 ಸಂಖ್ಯೆಗಳು
2. ಮಾರ್ಷಲ್ ಜೀಪು – 1 ಸಂಖ್ಯೆಗಳು

ಉಡುಪಿ

ಉಪಕರಣಗಳು

1. ಹ್ಯಾಂಡಿ ಕ್ಯಾಮ್ಸ್ – 2 ಸಂಖ್ಯೆಗಳು

ಆಯುಧಗಳು

1. 7.62 ಎಂ. ಎಂ. ರೈಪಲ್‌ಗಳು – 2 ಸಂಖ್ಯೆಗಳು

ಸಂಪರ್ಕ ಉಪಕರಣಗಳು :

1. ವಿ.ಹೆಚ್.ಎಫ್ ಮೊಬೈಲ್ – 144 ಸಂಖ್ಯೆಗಳು
2. ವಿ.ಹೆಚ್.ಎಫ್ ವಾಕಿಟಾಕಿಗಳು – 165 ಸಂಖ್ಯೆಗಳು.
3. ನಿರ್ವಹಣಾ ರಹಿತ ಬ್ಯಾಟರಿಗಳು – 75 ಸಂಖ್ಯೆಗಳು.
4. 100 ಅಡಿ ಸ್ವಯಂ ಸಹಾಯಕ ಏರಿಯಲ್ ಟವರ್ಸ್ – 15 ಸಂಖ್ಯೆಗಳು
5. ಫ್ಯಾಕ್ಸ್ ಯಂತ್ರಗಳು – 8 ಸಂಖ್ಯೆಗಳು

ವಾಹನಗಳು ;

1. ಕ್ವಾಲಿಸ್ – 1 ಸಂಖ್ಯೆಗಳು
2. ಟಾಟಾ ಸ್ವೇಷಿಯೋ – 1 ಸಂಖ್ಯೆಗಳು.
3. ಮಾರ್ಷಲ್ ಜೀಪು – 2 ಸಂಖ್ಯೆಗಳು
4. ಟಾಟಾ ಬಸ್ – 1 ಸಂಖ್ಯೆಗಳು
5. ಟಾಟಾ ಅಂಬ್ಯುಲೆನ್ಸ್ – 1 ಸಂಖ್ಯೆಗಳು

2004–05ನೇ ಸಾಲಿನಲ್ಲಿ ತೋರಿಸಿದ ರೀತಿಯಲ್ಲಿಯೇ 2005–06ನೇ ಸಾಲಿನಲ್ಲಿ ಡಿಜಿಟಲ್ ಕ್ಯಾಮರಾಗಳು, ಹ್ಯಾಂಡಿ ಕ್ಯಾಮ್‌ಗಳು, ಕಾಪಿಯಿಂಗ್ ಯಂತ್ರಗಳು ಮುಂತಾದ ಉಪಕರಣಗಳನ್ನು ಮತ್ತು ಡೀಪ್ ಸರ್ಚ್ ಮೆಟಲ್ ಡಿಟೆಕ್ಟರ್, ಅಂಡರ್ ವೆಹಿಕಲ್ ಸರ್ಚ್ ಮಿರರ್ ಗಳಂತಹ ಭದ್ರತಾ ಉಪಕರಣಗಳು, ವಿ.ಹೆಚ್.ಎಫ್/ಯು.ಹೆಚ್.ಎಫ್. ಮೊಬೈಲ್ ಸೆಟ್‌ಗಳು, ವಾಕಿ ಟಾಕಿಗಳು, ಏರಿಯಲ್ ಗೋಪುರಗಳಂತಹ ಸಂಪರ್ಕ ಸಾಧನಗಳನ್ನು ಮತ್ತು ಜೀಪುಗಳಂತಹ ಲಘು ವಾಹನಗಳನ್ನು , ದ್ವಿಚಕ್ರ ವಾಹನಗಳನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಎರಡು ಜಿಲ್ಲೆಗಳಿಗೆ ಒದಗಿಸಲಾಗುತ್ತಿದೆ. ಈ ಉಪರಕರಣ/ ವಾಹನಗಳನ್ನು ಖರೀದಿಸುವ ಪ್ರಕ್ರಿಯೆಯು ವಿವಿಧ ಹಂತದಲ್ಲಿದ್ದು ಅವುಗಳನ್ನು ಅಂತಿಮವಾಗಿ ಖರೀದಿಸಿದ ನಂತರವೇ ನಿಖರವಾದ ಸಂಖ್ಯೆಗಳನ್ನು ತಿಳಿಸ

ಬಹುದಾಗಿದೆ, ಅದರಲ್ಲೂ ಅತಿ ಸೂಕ್ಷ ಪೊಲೀಸ್ ಠಾಣೆಗಳಿಗೆ ಇವುಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ (ಎ)ಗೆ ಸಂಬಂಧಿಸಿದಂತೆ ಪೂರಕ ಟಿಪ್ಪಣಿ

ಆಧುನೀಕರಣ ಯೋಜನೆಯ 2000–01ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಮತ್ತು ಮುಂದವರದಿರುವ ಯೋಜನೆಯಡಿಯಲ್ಲಿ ರಾಜ್ಯದ ಪೊಲೀಸ್ ಇಲಾಖೆಗೆ ವಸತಿ ಮತ್ತು ವಸತಿಯೇತರ ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ. ರಾಜ್ಯದ ಎಲ್ಲಾ ಪೊಲೀಸ್ ಠಾಣೆಯನ್ನು ಕಂಪ್ಯೂಟರೀಕರಣಗೊಳಿಸಲಾಗಿದ್ದು ಮತ್ತು ಎಲ್ಲಾ ಠಾಣೆಗಳನ್ನೂ ಕಂಪ್ಯೂಟರ್ ಮೂಲಕ ಜಿಲ್ಲಾ ಕೇಂದ್ರದೊಂದಿಗೆ ಸಂಪರ್ಕದೊರೆಯುವ ಕಾರ್ಯ ಪ್ರಗತಿಯಲ್ಲಿದೆ. ಸಂಪರ್ಕ ಸಾಧನಗಳಾದ ವಾಕಿ–ಟಾಕಿ, ವಿಹೆಚ್ಎಫ್, ಯುಹೆಚ್ಎಫ್, ಉಪಕರಣಗಳನ್ನು ಎಲ್ಲ ಪೊಲೀಸ್ ಠಾಣೆಗಳಿಗೆ ಒದಗಿಸಲಾಗಿದೆ. ಕೆಲವೊಂದು ಸಂದರ್ಭದಲ್ಲಿ ಬೀಟ್ ಪೊಲೀಸ್ ಸಿಬ್ಬಂದಿಯವರಿಗೂ ಸಹ ನಿಷ್ಠಯ ಉಪಕರಣಗಳನ್ನು ನೀಡಲಾಗಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕರು ಮತ್ತು ನಗರಗಳ ಪೊಲೀಸ್‌ಗಳು ತಮ್ಮ ಅಧೀನದ ಅತಿ ಹೆಚ್ಚು ಪೊಲೀಸ್ ಠಾಣೆಗಳಿಗೆ ಒದಗಿಸುವ ಸಲುವಾಗಿ ಕೈಯಲ್ಲಿ ಹಿಡಿಯಬಹುದಾದ ಮೆಟಲ್ ಡಿಟೆಕ್ಟರ್, ಬಾಗಿಲುಗಳಿಗೆ ಅಳವಡಿಸಿರುವ ಮೆಟಲ್ ಡಿಟೆಕ್ಟರ್, ಡೀಪ್ ಸರ್ಚ್ ಮೆಟಲ್ ಡಿಟೆಕ್ಟರ್, ಎಕ್ಸ್‌ಟೆನ್ಷನ್ ಮಿರರ್, ಸರ್ಚ್ ಲೈಟುಗಳು, ನೈಟ್ ವಿಜನ್ ಬೈನಾಕ್ಯುಲರ್ ಬುಲೆಟ್ ಪ್ರೂಫ್ ಜಾಕೆಟ್‌ಗಳು ಹಾಗೂ ಇತರೆ ಆಯುಧಗಳೊಂದಿಗೆ ಅತ್ಯಾಧುನಿಕ ಎ. ಕೆ. 47 ರೈಫಲ್ಗಳು, 9 ಎಂ.ಎಂ. ಕಾರ್ಬೈಟ್‌ಗಳನ್ನು ಒದಗಿಸಲಾಗಿದೆ. ಇತರೆ ಉಪಕರಣಗಳಾದ ಪೋಟೋ ಕಾಪಿಯರ್‌ಗಳು, ಎಲ್‌ಸಿಡಿ ಪ್ರೊಜೆಕ್ಟರ್‌ಗಳು, ಜನರೇಟರ್ ಗಳನ್ನು ಸಹ ಜನರಿಗೆ ಒದಗಿಸಲಾಗಿದೆ. ಈ ಉಪಕರಣಗಳಲ್ಲಿ ಕೆಲವೊಂದು ಉಪಕರಣಗಳನ್ನು ಪ್ರಸ್ತುತ ವರ್ಷದಲ್ಲಿ ಕೆಲವು ಉಪಕರಣಗಳನ್ನು ಅಲ್ಲಿನ ಘಟಕಗಳಿಗೆ ಹಿಂದಿನ ವರ್ಷಗಳಲ್ಲಿ ಸರಬರಾಜು ಮಾಡಲಾಗಿದೆ. 2004–05ನೇ ಸಾಲಿನಲ್ಲಿ ಕೆಲವು ಘಟಕಗಳಿಗೆ ಕೆಲವು ಉಪಕರಣಗಳನ್ನು ಸರಬರಾಜು ಮಾಡಿದ ಬಗ್ಗೆ ನಮೂದಿಸಿಲ್ಲವಾದಾಗ್ಯೂ ಇವುಗಳನ್ನು ಹಿಂದಿನ ವರ್ಷಗಳಲ್ಲಿ ಸಂಪೂರ್ಣ ಮಾಡಿರಲಾಗಿದೆ ಅಥವಾ ಅಗತ್ಯವಿದ್ದಲ್ಲಿ ಮುಂಬರುವ ವರ್ಷಗಳಲ್ಲಿ ಆಯಾ ಉಪಕರಣಗಳನ್ನು ಸರಬರಾಜು ಮಾಡಲಾಗುವುದು.

ಹಲವು ಸೂಕ್ಷ್ಮ ಪ್ರದೇಶದಲ್ಲಿರುವ ಪೊಲೀಸ್ ಠಾಣೆಗಳನ್ನು ಹೆಚ್ಚುವರಿಯಾಗಿ, ನಿರ್ದಿಷ್ಟವಾಗಿ ಬಲಪಡಿಸುವ ವಿಶೇಷ ಉಪಕರಣಗಳನ್ನು

ಸರಬರಾಜು ಮಾಡಲು, ಮುಂಬರುವ ಆಧುನೀಕರಣ ಯೋಜನೆ ಮತ್ತು 12ನೇ ಹಣಕಾಸು ಆಯೋಗದ ಅವಧಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಹ ಇಂತಹ ಸೂಕ್ಷ್ಮವಾದ ಠಾಣೆಗಳಿದ್ದು ಆ ಜಿಲ್ಲೆಗಳನ್ನು ಸಹ, ಸದರೀ ಯೋಜನೆಯಲ್ಲಿ ಸೇರ್ಪಡಿಸಲಾಗುತ್ತದೆ.

ಅನುಬಂಧ – ಬಿ

2004–05ನೇ ಸಾಲಿನಲ್ಲಿ ಆಧುನೀಕರಣ ಯೋಜನೆಯಡಿಯಲ್ಲಿ ಪೂರ್ಣಗೊಳಿಸಲಾದ ಠಾಣೆಗಳ ಕಟ್ಟಡಗಳ ಸಂಖ್ಯೆ

ಕ್ರ. ಸಂಖ್ಯೆ	ಜಿಲ್ಲೆ	ಪೊಲೀಸ್ ಠಾಣೆಗಳ ಸಂಖ್ಯೆ
01.	ಬೆಂಗಳೂರು ನಗರ	6 ಪೊಲೀಸ್ ಠಾಣೆಗಳು
02.	ಬೆಂಗಳೂರು ಗ್ರಾಮಾಂತರ	–
03.	ಕೋಲಾರ	8 ಪೊಲೀಸ್ ಠಾಣೆಗಳು
04.	ತುಮಕೂರು	5 ಪೊಲೀಸ್ ಠಾಣೆಗಳು
05.	ಮೈಸೂರು	1 ಪೊಲೀಸ್ ಠಾಣೆಗಳು
06.	ಚಾಮರಾಜನಗರ	–
07.	ಮಂಡ್ಯ	–
08.	ಹಾಸನ	2 ಪೊಲೀಸ್ ಠಾಣೆಗಳು
09.	ಕೊಡಗು	3 ಪೊಲೀಸ್ ಠಾಣೆಗಳು
10.	ದಾವಣಗೆರೆ	–
11.	ಶಿವಮೊಗ್ಗ	–
12.	ಚಿತ್ರದುರ್ಗ	1 ಪೊಲೀಸ್ ಠಾಣೆ
13.	ಬಳ್ಳಾರಿ	2 ಪೊಲೀಸ್ ಠಾಣೆಗಳು
14.	ಗುಲ್ಬರ್ಗ	5 ಪೊಲೀಸ್ ಠಾಣೆಗಳು
15.	ಬೀದರ್	4 ಪೊಲೀಸ್ ಠಾಣೆಗಳು
16.	ರಾಯಚೂರು	1 ಪೊಲೀಸ್ ಠಾಣೆಗಳು
17.	ಕೊಪ್ಪಳ	2 ಪೊಲೀಸ್ ಠಾಣೆಗಳು
18.	ಬೆಳಗಾವಿ	1 ಪೊಲೀಸ್ ಠಾಣೆಗಳು
19.	ಧಾರವಾಡ	5 ಪೊಲೀಸ್ ಠಾಣೆಗಳು
20.	ಗದಗ	4 ಪೊಲೀಸ್ ಠಾಣೆಗಳು
21.	ಹಾವೇರಿ	1 ಪೊಲೀಸ್ ಠಾಣೆಗಳು
22.	ಬಿಜಾಪುರ	5 ಪೊಲೀಸ್ ಠಾಣೆಗಳು
23.	ಬಾಗಲಕೋಟೆ	3 ಪೊಲೀಸ್ ಠಾಣೆಗಳು

24.	ದಕ್ಷಿಣ ಕನ್ನಡ	–
25.	ಉತ್ತರ ಕನ್ನಡ	5 ಪೊಲೀಸ್ ಠಾಣೆಗಳು
26.	ಉಡುಪಿ	–
27.	ಚಿಕ್ಕಮಗಳೂರು	7 ಪೊಲೀಸ್ ಠಾಣೆಗಳು

ಅನುಬಂಧ – (ಬಿ)ಗೆ ಸಂಬಂಧಿಸಿದಂತೆ ಪೂರಕ ಮಾಹಿತಿ

2004–05ನೇ ಸಾಲಿನಲ್ಲಿ ಆಧುನೀಕರಣ ಯೋಜನೆಯಡಿಯಲ್ಲಿ

ಪೂರ್ಣಗೊಳಿಸಲಾದ ಠಾಣೆಗಳ ಕಟ್ಟಡಗಳ ಸಂಖ್ಯೆ

ಕ್ರ. ಸಂ.	ಜಿಲ್ಲೆ	ಪೊಲೀಸ್ ಠಾಣೆಗಳ ಸಂಖ್ಯೆ	ಪೊಲೀಸ್ ಠಾಣೆಗಳ ಹೆಸರು	
1.	ಬೆಂಗಳೂರು ನಗರ	6 ಪೊಲೀಸ್ ಠಾಣೆಗಳು	1.	ಕಾಮಕ್ಷಿ ಪಾಳ್ಯ ಠಾಣೆ
			2.	ಬಸವನಗುಡಿ ಮಹಿಳಾ ಠಾಣೆ
			3.	ತ್ಯಾಗರಾಜನಗರ ಠಾಣೆ
			4.	ಸುಬ್ರಮಣ್ಯನಗರ ಠಾಣೆ
			5.	ಶಿವಾಜಿನಗರ ಠಾಣೆ
			6.	ಶಿವಾಜಿನಗರ ಸಂಚಾರಿ ಠಾಣೆ
2.	ಬೆಂಗಳೂರು ಗ್ರಾಮಾಂತರ	–	–	
3.	ಕೋಲಾರ	8 ಪೊಲೀಸ್ ಠಾಣೆಗಳು	1.	ಬಾಗೇಪಲ್ಲಿ ಗ್ರಾಮಾಂತರ ಠಾಣೆ
			2.	ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ
			3.	ಕೆಂಚಾರ್ಲಹಳ್ಳಿ ಗ್ರಾಮಾಂತರ ಠಾಣೆ
			4.	ಗೌರಿಬಿದನೂರು ಗ್ರಾಮಾಂತರ ಠಾಣೆ
			5.	ಶ್ರೀನಿವಾಸಪುರ ಗ್ರಾಮಾಂತರ ಠಾಣೆ
			6.	ಗೌನಿಪಲ್ಲಿ ಗ್ರಾಮಾಂತರ ಠಾಣೆ
			7.	ಚೇಳೂರು ಗ್ರಾಮಾಂತರ ಠಾಣೆ
			8.	ಶಿಡ್ಲಘಟ್ಟ ಗ್ರಾಮಾಂತರ ಠಾಣೆ
4.	ತುಮಕೂರು	5 ಪೊಲೀಸ್ ಠಾಣೆಗಳು	1.	ತಿಪಟೂರು ಗ್ರಾಮಾಂತರ ಠಾಣೆ
			2.	ತಿಪಟೂರು ನಗರ ಠಾಣೆ
			3.	ಹುಲಿಯೂರುದುರ್ಗ ಗ್ರಾಮಾಂತರ ಠಾಣೆ
			4.	ಪಟ್ಟನಾಯ್ಕನಹಳ್ಳಿ ಗ್ರಾಮಾಂತರ ಠಾಣೆ
			5.	ಹಂದನಕೆರೆ ಗ್ರಾಮಾಂತರ ಠಾಣೆ

5.	ಮೈಸೂರು	1 ಪೊಲೀಸ್ ಠಾಣೆ	ವಿಜಯನಗರ ಠಾಣೆ	
6.	ಚಾಮರಾಜನಗರ	–	–	
7.	ಮಂಡ್ಯ	–	–	
8.	ಹಾಸನ	2 ಪೊಲೀಸ್ ಠಾಣೆಗಳು	1.	ಹಾಸನ ಬಡಾವಣೆ ಠಾಣೆ
			2.	ಹಾಸನ ಬಡಾವಣೆ ಸಂಚಾರಿ ಠಾಣೆ
9.	ಕೊಡಗು	3 ಪೊಲೀಸ್ ಠಾಣೆಗಳು	1.	ಶನಿವಾರ ಸಂತೆ ಗ್ರಾಮಾಂತರ ಠಾಣೆ
			2.	ಪೊನ್ನಂಪೇಟೆ ಗ್ರಾಮಾಂತರ ಠಾಣೆ
			3.	ಶ್ರೀಮಂಗಲ ಗ್ರಾಮಾಂತರ ಠಾಣೆ
10.	ದಾವಣಗೆರೆ	–	–	
11.	ಶಿವಮೊಗ್ಗ	–	–	
12.	ಚಿತ್ರದುರ್ಗ	1 ಪೊಲೀಸ್ ಠಾಣೆ		ಶ್ರೀರಾಂಪುರ ಗ್ರಾಮಾಂತರ ಠಾಣೆ
13.	ಬಳ್ಳಾರಿ	2 ಪೊಲೀಸ್ ಠಾಣೆಗಳು	1.	ಕುರಗೋಡು ಗ್ರಾಮಾಂತರ ಠಾಣೆ
			2.	ತೆಕ್ಕಲಕೋಟೆ ಗ್ರಾಮಾಂತರ ಠಾಣೆ
14.	ಗುಲ್ಬರ್ಗಾ	5 ಪೊಲೀಸ್ ಠಾಣೆಗಳು	1.	ರಾಘವೇಂದ್ರ ನಗರ ಪುರ ಠಾಣೆ
			2.	ಶಹಬಾದ್ ಗ್ರಾಮಾಂತರ ಠಾಣೆ
			3.	ವಾಡಿ ಗ್ರಾಮಾಂತರ ಠಾಣೆ
			4.	ಕೊಡೆಕಲ್ ಗ್ರಾಮಾಂತರ ಠಾಣೆ
			5.	ನಾರಾಯಣಪುರ ಗ್ರಾಮಾಂತರ ಠಾಣೆ
15.	ಬೀದರ್	4 ಪೊಲೀಸ್ ಠಾಣೆಗಳು	1.	ಮಠಾಳ ಗ್ರಾಮಾಂತರ ಠಾಣೆ
			2.	ಭಾಲ್ಕಿ ನಗರ ಠಾಣೆ
			3.	ಕಮಲಾನಗರ ಗ್ರಾಮಾಂತರ ಠಾಣೆ
			4.	ಬೀದರ್ ನಗರ ಠಾಣೆ
16.	ರಾಯಚೂರು	1 ಪೊಲೀಸ್ ಠಾಣೆ		ಗಬ್ಬೂರು ಗ್ರಾಮಾಂತರ ಠಾಣೆ

17.	ಕೊಪ್ಪಳ	2 ಪೊಲೀಸ್ ಠಾಣೆಗಳು	1.	ಮುನಿರಾಬಾದ್ ಗ್ರಾಮಾಂತರ ಠಾಣೆ
			2.	ಯಲಬುರ್ಗಾ ಗ್ರಾಮಾಂತರ ಠಾಣೆ
18.	ಬೆಳಗಾವಿ	1 ಪೊಲೀಸ್ ಠಾಣೆ		ಬೆಳಗಾಂ ನಗರ ದಕ್ಷಿಣ ಸಂಚಾರಿ ಠಾಣೆ
19	ಧಾರವಾಡ	6 ಪೊಲೀಸ್ ಠಾಣೆಗಳು	1.	ಹುಬ್ಬಳ್ಳಿ ಉಪ-ವಿಭಾಗ ಠಾಣೆ
			2.	ಹುಬ್ಬಳ್ಳಿ ಮಹಿಳಾ ಠಾಣೆ
			3.	ಹುಬ್ಬಳ್ಳಿ ಉತ್ತರ ಸಂಚಾರಿ ಠಾಣೆ
			4.	ಕಲಘಟಗಿ ಗ್ರಾಮಾಂತರ ಠಾಣೆ
			5.	ವಿದ್ಯಾಗಿರಿ ನಗರ ಠಾಣೆ
			6.	ಗದಗ ಗ್ರಾಮಾಂತರ ಠಾಣೆ
20.	ಗದಗ	4 ಪೊಲೀಸ್ ಠಾಣೆಗಳು	1.	ಬೆಟಗೇರಿ ಗ್ರಾಮಾಂತರ ಠಾಣೆ
			2.	ಬೆಟಗೇರಿ ಸಂಚಾರಿ ಠಾಣೆ
			3.	ಗರಗ ಸಂಚಾರಿ ಠಾಣೆ
			4.	ಮುಳಗುಂದ ಗ್ರಾಮಾಂತರ ಠಾಣೆ
21.	ಹಾವೇರಿ	1 ಪೊಲೀಸ್ ಠಾಣೆ		ಹಾವೇರಿ ಗ್ರಾಮಾಂತರ ಠಾಣೆ
22.	ಬಿಜಾಪುರ	5 ಪೊಲೀಸ್ ಠಾಣೆಗಳು	1.	ಬಬಲೇಶ್ವರ ಗ್ರಾಮಾಂತರ ಠಾಣೆ
			2.	ಹೊರ್ತಿ ಗ್ರಾಮಾಂತರ ಠಾಣೆ
			3.	ಝಳಕಿ ಗ್ರಾಮಾಂತರ ಠಾಣೆ
			4.	ಕಲಕೇರಿ ಗ್ರಾಮಾಂತರ ಠಾಣೆ
			5.	ಕೊರವಾರ ಗ್ರಾಮಾಂತರ ಠಾಣೆ
23.	ಬಾಗಲಕೋಟೆ	3 ಪೊಲೀಸ್ ಠಾಣೆಗಳು	1.	ಬಾಗಲಕೋಟೆ ಸಂಚಾರಿ ಠಾಣೆ
			2.	ಮಹಾಲಿಂಗಪುರ ನಗರ ಠಾಣೆ
			3.	ಸಾವಳಗಿ ನಗರ ಠಾಣೆ
24.	ದಕ್ಷಿಣ ಕನ್ನಡ	–	–	
25.	ಉತ್ತರ ಕನ್ನಡ	5 ಪೊಲೀಸ್ ಠಾಣೆಗಳು	1.	ಸಿದ್ದಾಪುರ ಗ್ರಾಮಾಂತರ ಠಾಣೆ
			2	ಕದ್ರಾ ಗ್ರಾಮಾಂತರ ಠಾಣೆ
			3.	ಕಾರವಾರ ಗ್ರಾಮಾಂತರ ಠಾಣೆ
			4.	ಮಂಕಿ ಗ್ರಾಮಾಂತರ ಠಾಣೆ
			5.	ಮುರಡೇಶ್ವರ ಗ್ರಾಮಾಂತರ ಠಾಣೆ

26.	ಉಡುಪಿ	–	–	
27.	ಚಿಕ್ಕಮಗಳೂರು	7 ಪೊಲೀಸ್ ಠಾಣೆಗಳು	1.	ಬೀರೂರು ಗ್ರಾಮಾಂತರ ಠಾಣೆ
			2.	ಆಲ್ದೂರು ಗ್ರಾಮಾಂತರ ಠಾಣೆ
			3.	ಬಣಕಲ್ ಗ್ರಾಮಾಂತರ ಠಾಣೆ
			4.	ಅಜ್ಜಂಪುರ ಗ್ರಾಮಾಂತರ ಠಾಣೆ
			5.	ಲಕ್ಕವಳ್ಳಿ ಗ್ರಾಮಾಂತರ ಠಾಣೆ
			6.	ಶ್ರೀರಾಂಪುರ ಗ್ರಾಮಾಂತರ ಠಾಣೆ
			7.	ಗೋಣಿಬೀಡು ಗ್ರಾಮಾಂತರ ಠಾಣೆ

ಅನುಬಂಧ – (ಡಿ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು 28 ಪೊಲೀಸ್ ಠಾಣೆಗಳ ಪೈಕಿ 25 ಪೊಲೀಸ್ ಠಾಣೆಗಳು ಇಲಾಖಾ ವತಿಯಿಂದ ನಿರ್ಮಿಸಲಾದ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಜಿಲ್ಲೆಯ ಸುರತ್ಕಲ್ ಮತ್ತು ಕಲ್ಲಡ್ಕದಲ್ಲಿ ಸಂಚಾರಿ ಸೇವಾ ಕೇಂದ್ರ ತೆರೆಯಲು ಇಲಾಖಾ ವತಿಯಿಂದ ಎರಡು ಕಟ್ಟಡಗಳನ್ನು ಆಧುನೀಕರಣ ಯೋಜನೆಯಲ್ಲಿ ನಿರ್ಮಿಸಲಾಗಿದೆ. ಎಲ್ಲಾ ಪೊಲೀಸ್ ಠಾಣೆಗಳಿಗೆ ಇಲಾಖಾ ವಾಹನಗಳನ್ನು ಒದಗಿಸಲಾಗಿದ್ದು ಮತ್ತು ಆಧುನಿಕವಾಗಿ ಕಾರ್ಯನಿರ್ವಹಣೆಗೆ ಎಲ್ಲಾ ಪೊಲೀಸ್ ಠಾಣೆಗಳಿಗೆ ಕಂಪ್ಯೂಟರ್ ಒದಗಿಸಿ ದಾಖಲೆಗಳನ್ನು ಗಣಕೀಕೃತಗೊಳಿಸಿ. ಕಂಪ್ಯೂಟರ್ ನೆಟ್ವರ್ಕ್ ಮುಖಾಂತರ ಕ್ಷಿಪ್ರ ರೀತಿಯಲ್ಲಿ ಕಾರ್ಯ ನಿರ್ವಹಿಸ ಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾ ನಿಯಂತ್ರಣ ಕೊಠಡಿಗೆ ಪೋಲ್ ನೆಟ್‌ವರ್ಕಿಗೆ ಸಂಬಂಧಿಸಿದಂತೆ ಅಗತ್ಯವಿರುವ ಕಂಪ್ಯೂಟರ್‌ಗಳು, ಹವಾ ನಿಯಂತ್ರಣ ಯಂತ್ರ, ಜಿಲ್ಲೆಯ ವಿಶೇಷ ಘಟಕಗಳ ಕಂಪ್ಯೂಟರ್‌ಗೆ ಸಂಬಂಧಿಸಿ ದಂತೆ ಮೂಲಭೂತ ಸೌಕರ್ಯ, ಇನ್ನಿತರ ಉಪಕರಣಗಳನ್ನು ಆಳವಡಿಸ ಲಾಗಿದೆ. ಮಂಗಳೂರು ಉತ್ತರ, ಪೂರ್ವ ಮತ್ತು ಗ್ರಾಮಾಂತರ ಠಾಣೆಗಳಿಗೆ ಕಾಮನ್ ಇಂಟಿಗ್ರೇಟೆಡ್ ಪೊಲೀಸ್ ಅಪ್ಲಿಕೇಶನ್. (ಇಲಾಖೆ)ಗೆ ಸಂಬಂಧಿಸಿದಂತೆ ಸೌಕರ್ಯ ಒದಗಿಸಲಾಗಿದೆ.

2004–05ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಆಧುನೀಕರಣ ಯೋಜನೆಯಲ್ಲಿ ಒಟ್ಟು ಒಂಬತ್ತು (2ಟೆಂಪೋ, 2 ಜೀಪು ಮತ್ತು 5 ಮೋಟಾರ್ ಸೈಕಲ್) ಇಲಾಖಾ ವಾಹನಗಳನ್ನು ಒದಗಿಸಲಾಗಿದೆ.

2004–05ನೇ ಸಾಲಿನಲ್ಲಿ ಆಧುನೀಕರಣ ಯೋಜನೆಯಡಿಯಲ್ಲಿ ರೂಪಾಯಿ ಒಂದು ಲಕ್ಷಗಳ ವೆಚ್ಚದಲ್ಲಿ ಒಟ್ಟು 21 ರಿಚಾರ್ಜ್‌ಬಲ್ ಸರ್ಚ್‌ಲೈಟ್‌ಗಳನ್ನು ಖರೀದಿಸಿ ವಿವಿಧ ಠಾಣೆಗಳಿಗೆ ಸರಬರಾಜು ಮಾಡಲಾಗಿದೆ.

1) ಪೂರಕ ಟಿಪ್ಪಣಿ : ಉಪ್ಪಿನಂಗಡಿ ಪೊಲೀಸ್ ಠಾಣೆಯನ್ನು ಕಟ್ಟಲು 11ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಈಗಾಗಲೇ ಮಂಜೂರಾತಿಯನ್ನು ನೀಡಲಾಗಿದ್ದು, ನಿವೇಶನ ಲಭ್ಯವಾಗದ ಕಾರಣ ಈ ಕಾಮಗಾರಿಯನ್ನು ಆರಂಭಿಸಿಲ್ಲ. ನಿವೇಶನ ಲಭ್ಯವಾದ ತಕ್ಷಣ ಆದ್ಯತೆ ಮೇರೆಗೆ ಈ ಠಾಣೆಯನ್ನು ಕಟ್ಟಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – (ಡಿ)

ಉಡುಪಿ ಜಿಲ್ಲೆಯಲ್ಲಿ ಅತೀ ಸೂಕ್ಷ್ಮ ಪ್ರದೇಶದ ಪೊಲೀಸ್ ಠಾಣೆಗಳಾದ ಹೆಬ್ರಿ ಕಾರ್ಕಳ ನಗರ ಮತ್ತು ಗ್ರಾಮಾಂತರ, ಬೈಂದೂರು ಶಂಕರನಾರಾಯಣ ಮತ್ತು ಕೊಲ್ಲೂರು ಪೊಲೀಸ್ ಠಾಣೆಗಳಿಗೆ ಆಧುನೀಕರಣ ಯೋಜನೆಯಲ್ಲಿ ಅವಶ್ಯವಿರುವ ಕಡೆ ಹೊರ ಪೊಲೀಸ್ ಠಾಣೆಗಳನ್ನು ಕಟ್ಟಲಾಗಿದ್ದು ಎಲ್ಲಾ ಪೊಲೀಸ್ ಠಾಣೆಗಳಿಗೆ ಅಧುನಿಕ ಉಪಕರಣಗಳೊಂದಿಗೆ ಕಂಪ್ಯೂಟರ್‌ಗಳು ಮತ್ತು ವಾಹನಗಳನ್ನು ಒದಗಿಸಲಾಗಿದೆ. ಈ ಪೊಲೀಸ್ ಠಾಣೆಗಳ ಸಿಬ್ಬಂದಿಯನ್ನು ಹೆಚ್ಚಿಸಲು ಸಹ ಪ್ರಸ್ತಾವನೆ ಬಂದಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತದೆ.

2004–05ನೇ ಸಾಲಿನಲ್ಲಿ ಈ ಜಿಲ್ಲೆಯ ಕೆಳಗೆ ನಮೂದಿಸಿರುವಂತೆ ಠಾಣೆಗಳಿಗೆ ಅವುಗಳ ಎದುರು ಹೆಸರಿಸಿದ ಉಪಕರಣ ಮತ್ತು ವಾಹನಗಳನ್ನು ಒದಗಿಸಲಾಗಿದೆ. :

1) ಮಲ್ಪೆ ಪೊಲೀಸ್ ಠಾಣೆ – ಒಂದು ಜೆರಾಕ್ಸ್ ಯಂತ್ರ
2) ಹಿರಿಯಡ್ಕ ಪೊಲೀಸ್ ಠಾಣೆ – ಒಂದು ಜೆರಾಕ್ಸ್ ಯಂತ್ರ
3) ಕೋಟಾ ಪೊಲೀಸ್ ಠಾಣೆ – ಒಂದು ಜೆರಾಕ್ಸ್ ಯಂತ್ರ
4) ಗಂಗೊಳ್ಳಿ ಪೊಲೀಸ್ ಠಾಣೆ – ಒಂದು ಜೆರಾಕ್ಸ್ ಯಂತ್ರ
5) ಹೆಬ್ರಿ ಪೊಲೀಸ್ ಠಾಣೆ – ಒಂದು ಜೆರಾಕ್ಸ್ ಯಂತ್ರ
6) ಕೊಲ್ಲೂರು ಪೊಲೀಸ್ ಠಾಣೆ – ಒಂದು ಜೀಪು
7) ಶಂಕರನಾರಾಯಣ ಪೊಲೀಸ್ ಠಾಣೆ – ಒಂದು ಜೀಪು

ಸಂಖ್ಯೆ : ಹೆಚ್‌ಡಿ : 33 : ಪಿಒಪಿ : 2006

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿರುವ ಪೊಲೀಸ್ ಠಾಣೆಗಳು ಯಾವುವು ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ, ನಕ್ಸಲರನ್ನು ಎದುರಿಸಬೇಕಾಗಿರುವಂಥ ಸಂಧರ್ಬಗಳಲ್ಲಿ ಬೇಕಾಗಿರುವ ಶಸ್ತ್ರಗಳನ್ನು ಮಾತ್ರ ಕೊಟ್ಟರೆ ಸಾಲದು. ಅಂಥ ಪೋಲಿಸರಿಗೆ ಸರಿಯಾದಂಥ ತರಭೇತಿಯನ್ನು ಕೊಡುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ. ಮೂಲಭೂತ

ಸೌಕರ್ಯಗಳನ್ನು ಪೊಲೀಸ್ ಇಲಾಖೆಯವರಿಗೆ, ಅಂದರೆ ಅವರಿಗೆ ಬೇಕಾಗಿರುವಂಥ ವಸತಿ ಸೌಕರ್ಯವನ್ನು ಎಲ್ಲಾ ಕಡೆಗಳಲ್ಲಿ ಮಾಡಲಾಗಿದೆಯೇ? ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲೆಗಳಿಗೆ ಆಧುನೀಕರಣ ಯೋಜನೆಯಡಿಯಲ್ಲಿ ಲಭ್ಯವಾಗುವ ಸವಲತ್ತುಗಳನ್ನು ಅಲ್ಲಿಯ ಠಾಣೆಗಳಿಗೆ ಅವಶ್ಯಕತೆಗಳಿಗೆ ಅನುಗುಣವಾಗಿ ವ್ಯವಸ್ಥೆ ಮಾಡಲಾಗಿದೆ. ದಕ್ಷಿಣಕನ್ನಡ ಜಿಲ್ಲೆಗೆ ಸಂಬಂಧಿಸಿದ ವಿಷಯದಲ್ಲಿ ಒಟ್ಟು 28 ಪೊಲೀಸ್ ಠಾಣೆಗಳ ಪೈಕಿ 25 ಪೊಲೀಸ್ ಠಾಣೆಗಳು ಇಲಾಖಾ ವತಿಯಿಂದ ನಿರ್ಮಿಸಲಾದ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಜಿಲ್ಲೆಯ ಸುರತ್ಕಲ್ ಮತ್ತು ಕಲ್ಲಡಕದಲ್ಲಿ ಸಂಚಾರಿ ಸೇವಾ ಕೇಂದ್ರ ತೆರೆಯಲು ಇಲಾಖಾವತಿಯಿಂದ ಎರಡು ಕಟ್ಟಡಗಳನ್ನು ಆಧುನೀಕರಣ ಯೋಜನೆಯಲ್ಲಿ ನಿರ್ಮಿಸಲಾಗಿದೆ. ಎಲ್ಲಾ ಪೊಲೀಸ್ ಠಾಣೆಗಳಿಗೆ ಕಂಪ್ಯೂಟರ್ ಒದಗಿಸಿ ದಾಖಲೆಗಳನ್ನು ಗಣಕೀಕೃತಗೊಳಿಸಿ ಕಂಪ್ಯೂಟರ್ ನೆಟ್‌ವರ್ಕ್ ಮುಖಾಂತರ ಕ್ಷಿಪ್ರ ರೀತಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾ ನಿಯಂತ್ರಣ ಕೊಠಡಿಗೆ ಹೋಲ್ ನೆಟ್‌ವರ್ಕ್‌ಗೆ ಸಂಬಂಧಿಸಿದಂತೆ ಅಗತ್ಯವಿರುವ ಕಂಪ್ಯೂಟರ್‌ಗಳು, ಹವಾನಿಯಂತ್ರಣ ಯಂತ್ರ, ಜಿಲ್ಲೆಯ ವಿಶೇಷ ಘಟಕಗಳಿಗೆ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯ ಹಾಗೂ ಇನ್ನಿತರ ಉಪಕರಣಗಳನ್ನು ಅಳವಡಿಸಲಾಗಿದೆ. ಮಂಗಳೂರು ಉತ್ತರ, ಪೂರ್ವ ಮತ್ತು ಗ್ರಾಮಾಂತರ ಠಾಣೆಗಳಿಗೆ common integrated police application ಅದಕ್ಕೆ ಸಂಬಂಧಿಸಿದ ಸೌಕರ್ಯ ಒದಗಿಸಲಾಗಿದೆ. 2004–2005ನೇ ಸಾಲಿನಲ್ಲಿ ದಕ್ಷಿಣಕನ್ನಡ ಜಿಲ್ಲೆಗೆ ಆಧುನೀಕರಣ ಯೋಜನೆಯಲ್ಲಿ ಒಟ್ಟು 9 ಇಲಾಖಾ ವಾಹನಗಳನ್ನು ಒದಗಿಸಲಾಗಿದೆ. 2004–05ನೇ ಸಾಲಿನಲ್ಲಿ ಆಧುನೀಕರಣ ಯೋಜನೆಯಡಿಯಲ್ಲಿ ಸುಮಾರು ಒಂದು ಲಕ್ಷ ವೆಚ್ಚದಲ್ಲಿ ಒಟ್ಟು 21 ರೀ–ಚಾರ್ಜಬಲ್ ಸರ್ಚ್‌ಲೈಟ್‌ಗಳನ್ನು ತರಿಸಿ ವಿವಿಧ ಠಾಣೆಗಳಿಗೆ ಸರಬರಾಜು ಮಾಡಲಾಗಿದೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳು 28 ಇದೆಯೇ? ಹೌದು, ನಾನು ಹೇಳಿರುವುದು ಸೂಕ್ಷ್ಮ ಪ್ರದೇಶದಲ್ಲಿರುವಂಥ ಪೊಲೀಸ್ ಠಾಣೆಗಳು ಯಾವುವು? ಅದು ನಕ್ಸಲ್ ಪೀಡಿತ ಪ್ರದೇಶದಲ್ಲಿರುವಂಥ ಪೊಲೀಸ್

ಠಾಣೆಗಳು ಯಾವುವು? ಇದು ಒಂದು ಪ್ರಶ್ನೆ. ಎರಡನೆಯದಾಗಿ ನಕ್ಸಲ್‌ಪೀಡಿತ ಪ್ರದೇಶದಲ್ಲಿದ್ದವರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅವರಿಗೆ ತರಭೇತಿ ಕೊಡುವಂಥ ಒಂದು ಕಾರ್ಯಕ್ರಮವನ್ನು ಮಾಡಲು ಸರ್ಕಾರ ಏನಾದರೂ ಯೋಚನೆಯನ್ನು ಮಾಡಿದೆಯೇ? ಈ ವಿಚಾರವಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿ ಕೆಲವು ಕಡೆ ಕೆಲವರು ಏನು ನಕ್ಸಲೈಟ್ ಚಟುವಟಿಕೆಗಳಲ್ಲಿ ತೊಡಗಿರತಕ್ಕಂಥ ವಿಷಯದಲ್ಲಿ ಈಗಾಗಲೇ ಪೊಲೀಸ್ ಇಲಾಖೆ ವತಿಯಿಂದ ಹೆಚ್ಚಿನ ಆಧುನೀಕರಣ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ನುರಿತ ವಿಷಯದಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೆಲವು ನುರಿತ ಅಧಿಕಾರಿಗಳನ್ನು ಆ ಭಾಗಕ್ಕೆ ಡೆಪ್ಯುಟಿ ಮಾಡತಕ್ಕಂಥದ್ದಕ್ಕೆ ಕ್ರಮವನ್ನು ತೆಗೆದುಕೊಂಡಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಪಡೆದು ಒಂದು ಉಪ ಪ್ರಶ್ನೆಯನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ಬೇಗ ಕಳಿಸಿ ಮುಗಿಸಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲೂ ನಕ್ಸಲೈಟ್ ಸಮಸ್ಯೆ ಇದೆ. ನಾನು ಒಂದು ಉಪ ಪ್ರಶ್ನೆಯನ್ನು ಕೇಳಲು ಅನುಮತಿ ಕೊಡಬೇಕು.

ಅಧ್ಯಕ್ಷರು : ತುಂಬಾ ಸದಸ್ಯರು ಒಂದೇ ಪ್ರಶ್ನೆ ಮೇಲೆ ಉಪ ಪ್ರಶ್ನೆ ಕೇಳುತ್ತಾ ಹೋದರೆ ಸಮಯ ಸಾಲುವುದಿಲ್ಲ. ಯೋಗೀಶ್‌ಭಟ್‌ರವರು ಕೇಳಿದ ಮೇಲೆ ತಾವು ಕೇಳಿ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಸ್ಪೆಶಲ್ ಏಕನಾಮಿಕ್ ಜೋನ್ ಮತ್ತು ವಿಶೇಷ ಆರ್ಥಿಕ ವಲಯ ಎಂದು ಏನು ಬೇರೆ ಬೇರೆ ರೀತಿಯಲ್ಲಿ 50 ಸಾವಿರ ಕೋಟಿ ರೂ. ಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯಾಗುತ್ತಿದೆ. ವಿಪರೀತವಾದಂಥ ವಾಹನ ದಟ್ಟಣೆ ಇದೆ. ಎರಡು ಲಕ್ಷಕ್ಕಿಂತ ಹೆಚ್ಚಿನ ವಾಹನ ದಟ್ಟಣೆ ಇದೆ. ಮಂಗಳೂರಿಗೆ ಪೊಲೀಸ್ ಕಮಿಶನ್‌ರೇಟ್ ಸ್ಥಾನಮಾನವನ್ನು ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದಂಥ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ನಕ್ಸಲೈಟ್ ಸಮಸ್ಯೆಗೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಬಹುಶಃ ಅಲ್ಲಿಯ ಪೊಲೀಸ್ ಠಾಣೆಗಳಿಗೆ ನಿವೃತ್ತಿ ಅಂಚಿನಲ್ಲಿರುವಂಥ ಅಧಿಕಾರಿಗಳನ್ನು ಅಲ್ಲಿಗೆ

ಹಾಕಿದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ. ಇವೊತ್ತು ಹೈದ್ರಾಬಾದ್ ನಲ್ಲಿ ಒಂದು ಸ್ಪೆಶಲ್ ಟ್ರೈನಿಂಗ್ ಸೆಂಟರ್ ಇದೆ. ಅಲ್ಲಿಗೆ ಇಲ್ಲಿರುವವರನ್ನು ಕನಿಷ್ಠ ಕಳುಹಿಸಿ ತರಬೇತಿ ಕೊಡಿಸುವುದಕ್ಕೆ ಏನಾದರೂ ಕ್ರಮವನ್ನು ತೆಗೆದು ಕೊಳ್ಳುತ್ತಾರೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಕೂಡ ಕೆಲವೊಂದು ಪೊಲೀಸ್ ಠಾಣೆಗಳನ್ನು ಸೂಕ್ಷ್ಮವಾಗಿ ಗುರುತಿಸಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಕ್ಸಲೈಟ್‌ಗಳು ಮೊದಲು ಠಿಕಾಣಿ ಹೂಡಿದ್ದು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕೊಪ್ಪ, ಎಲ್ಲಾಪುರ, ಮೂಡಿಗೆರೆ, ಚಿಕ್ಕಮಂಗಳೂರು, ಕೆಲವೊಂದು ಭಾಗಗಳಲ್ಲಿ ಇದ್ದರು. ಈಗಾಗಲೇ ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿ ಭಾಗದಲ್ಲಿಯೂ ಕೂಡ ಅವರು ಬಂದಿದ್ದಾರೆ. ಅಲ್ಲಿಯ ಗ್ರಾಮಗಳಿಗೂ ನಕ್ಸಲೈಟ್‌ಗಳು ಬಂದಿರುವುದನ್ನು ಕಂಡು ಗ್ರಾಮಸ್ಥರುಗಳು ಹೆದರಿಕೊಂಡಿರುವ ವಿಚಾರ ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಾನು ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ನಕ್ಸಲೈಟ್ಸ್ ಗಳೇನೂ ಬೇರೆ ದೇಶದವರೇನಲ್ಲ. ಮುಖ್ಯಮಂತ್ರಿಗಳು ನಕ್ಸಲೈಟ್ಸ್‌ಗಳ ಮುಖಂಡರನ್ನು ಕರೆಸಿ ಅವರ ಜೊತೆ ಕುಳಿತು ಚರ್ಚೆ ಮಾಡಿದರೆ ಇವೊತ್ತು ಅಲ್ಲಿ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಕಾಡಿನಲ್ಲಿ ಜನರು ಏನು ವಾಸ ಮಾಡುತ್ತಿದ್ದಾರೆ, ಅವರ ಸಮಸ್ಯೆಗಳನ್ನ ನಿವಾರಣೆ ಮಾಡುವುದಕ್ಕೆ ಹಿಂದೆ, ಕಾಂಗ್ರೆಸ್ ಸರ್ಕಾರ ಮತ್ತು ಜೆ. ಡಿ. (ಎಸ್) ಸರ್ಕಾರದಲ್ಲಿ ಏನು ಪ್ಯಾಕೇಜನ್ನು ಮಾಡಿದ್ದರೋ ಆ ಪ್ಯಾಕೇಜ್‌ನ್ನು ಇಂಪ್ಲಿಮೆಂಟ್ ಮಾಡಿದರೆ ಆ ನಕ್ಸಲೈಟ್ ಹಾವಳಿ ಏನಾದರೂ ಕಡಿಮೆ ಆಗಬಹುದು ಎಂಬುದನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಇಲಾಖೆಯನ್ನು ಸದೃಢಗೊಳಿಸುವುದಕ್ಕೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಚಿಂತನೆಯನ್ನು ಮಾಡುತ್ತಿದೆ. ವಿಶೇಷ ಉಪಕರಣಗಳನ್ನು ಸರಬರಾಜು ಮಾಡತಕ್ಕಂಥದ್ದು, ಹಾಗೂ 12ನೇ ಹಣಕಾಸು ಆಯೋಗದ ಅವಧಿಯಲ್ಲಿ ಮುಂಬರುವ ಆಧುನೀಕರಣ ಯೋಜನೆಗಳಿಗೆ ಕ್ರಮ ಕೈಗೊಳ್ಳಲಾಗಿದೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇಂಥ ಸೂಕ್ಷ್ಮವಾದ ಪೊಲೀಸ್ ಠಾಣೆಗಳಿದ್ದು ಸದರಿ ಯೋಜನೆಯಲ್ಲಿ ಸೇರ್ಪಡಿಸಲಾಗುತ್ತದೆ. ಹಾಗೂ ಸನ್ಮಾನ್ಯ ಕೃಷ್ಣಮೂರ್ತಿಯವರು ಹೇಳಿದ ಹಾಗೆ ಆ ಭಾಗದಲ್ಲಿರ ತಕ್ಕಂಥವರ ಸಾಮಾಜಿಕ ಸಮಸ್ಯೆಗಳೇನಿದೆ ಅದನ್ನೂ ಕೂಡ ಸರ್ಕಾರ ಇವೊತ್ತು ಗಂಭೀರವಾಗಿ

ಪರಿಹರಿಸತಕ್ಕಂಥದ್ದಕ್ಕೆ ಕಾರ್ಯಕ್ರಮಗಳನ್ನು ಒಂದು ಕಡೆ ನಿರೂಪಿಸುವುದು, ಅದೇ ರೀತಿ ರಕ್ಷಣೆ ಕೊಡತಕ್ಕಂಥದ್ದಕ್ಕೆ ಗಮನವನ್ನು ಹರಿಸುತ್ತೇವೆ.

ವಿಜಾಪುರ ನಗರದಲ್ಲಿ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಗಳನ್ನು ತ್ವರಿತಗೊಳಿಸುವುದು.

(5) 122. ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ವಿಜಾಪುರ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಜಾಪುರ ನಗರದ ಕೇಂದ್ರ ಬಸ್ ನಿಲ್ದಾಣದ (KSRTC) ಕಾಮಗಾರಿಯ ಕಾರ್ಯವು ತೀವ್ರ ಮಂದಗತಿಯಿಂದಾಗಿ ವಿಳಂಬವಾಗಿ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಸ್ ನಿಲ್ದಾಣದ ಕಾಮಗಾರಿಯು ಪ್ರಾರಂಭವಾಗಿದ್ದು ಯಾವಾಗ ಹಾಗೂ ಯಾವ ಕಾಲಮಿತಿಯೊಳಗಾಗಿ ಕಾಮಗಾರಿಯನ್ನು ಮುಕ್ತಾಯಗೊಳಿಸಬೇಕಾಗಿತ್ತು;

ಇ) ಈ ಕಾಮಗಾರಿಯು ವಿಳಂಭವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಈ ನಿಲ್ದಾಣದ ಕಾಮಗಾರಿಯ ಅಂದಾಜು ಮೊತ್ತ ಎಷ್ಟು;

ಉ) ಇದುವರೆಗೂ ಬಿಡುಗಡೆಯಾಗಿರುವ ಹಣ ಎಷ್ಟು ಹಾಗೂ ಬಾಕಿ ಬಿಡುಗಡೆಯಾಗಬೇಕಿರುವ ಹಣ ಎಷ್ಟು ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು;

ಊ) ಯಾವ ಕಾಮಿತಿಯೊಳಗಾಗಿ ಈ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಯನ್ನು ಸಂಪೂರ್ಣಗೊಳಿಸಲಾಗುವುದು;

ಋ) ಈ ಕಾಮಗಾರಿಯ ಗುತ್ತಿಗೆದಾರರು ಯಾರು;

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು,

ಆ) ಪ್ರಾರಂಭವಾದ ದಿನಾಂಕ:30-10-2003 ಮತ್ತು ಮುಕ್ತಾಯ ಗೊಳಿಸಲು ನಿಗಧಿಪಡಿಸಿದ ದಿನಾಂಕ : 29-10-2005.

ಇ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಕ್ಲಿಷ್ಟಕರವಾಗಿರುವುದರಿಂದ, ಕಾಮಗಾರಿಯು ವಿಳಂಭವಾಗುತ್ತಿದೆ.

ಈ) ರೂ. 6.50 ಕೋಟಿಗಳು